# ಪ್ರೀತ್ಸೊದ್ ತಪ್ಪಾ?

"ರೀ, ಆ ಕೊನೇಮನೇಲಿ ಒಂದು ಹುಡುಗಿ ಇತ್ತಲ್ಲ, ಕಪ್ಪಗಿದ್ರೂ ಮುಖದಲ್ಲಿ ಖಳೆಯಿದೆ, ಕೃಷ್ಣ ಸುಂದರಿ ಅಂತೆಲ್ಲ ಅಂತಿದ್ರಲ್ಲ ಆ ಹುಡುಗಿ, ಪ್ರೀತ್ಸಿ ಅದ್ಯಾವುದೊ ಹುಡುಗನ ಜತೆ ಓಡಿ ಹೋಗಿದಾಳಂತೆ. ಪಾಪ ಅವರಮ್ಮ ಗೊಳೊ ಅಂತ ಅಳ್ತಾ ಇದಾಳೆ" ಅನ್ನುತ್ತ ಹೊರಗೆ ಹೋದವಳು, ಅಲ್ಲೇ ನಿಂತು ಪಕ್ಕದ ಮನೆ ಪದ್ದು ಜತೆ ಅಂತೆ ಕಂತೆಗಳೆಲ್ಲ ಮಾತಾಡಿ ಬಂದಳು. ನಾನು ಅಲ್ಲೇ ಯೋಚಿಸ್ತಾ ಕೂತಿದ್ದೆ, "ಏನು ನೀವು ಪದ್ದು ಜತೆ ಓಡಿ ಹೋಗೊಕೇ ಏನಾದ್ರೂ ಪ್ಲಾನ ಮಾಡ್ತಾ ಇದೀರಾ, ಹೇಗೆ" ಅಂತ ಕೇಳಿದ್ಲು, ನಾ ತಿರುಗಿ ಕೇಳಿದ್ದು ಒಂದೇ ಪ್ರಶ್ನೇ "ಪ್ರೀತ್ಸೊದ್ ತಪ್ಪಾ?"...

ಸ್ವಲ್ಪ ಹೊತ್ತು ಅವಳಿಗೇನು ಹೇಳಬೇಕು ಹೊಳೀಲೇ ಇಲ್ಲ, ಚಹ ಮಾಡ್ತಾ ಇದ್ದೋಳು, ಸಕ್ಕರೆ ಬದಲಿ ಉಪ್ಪು ಹಾಕಿಯಾಳು ಅಂತ ಸಕ್ಕರೆ ಡಬ್ಬಿ ನಾನೇ ಎತ್ತಿ ಕೊಟ್ಟೆ, "ಆದ್ರೂ ಈ ಲವ್ವು ಗಿವ್ವು ಎಲ್ಲಾ ಯಾಕೋ ಸರಿ ಹೋಗಲ್ಲರೀ" ಅಂತ ವಿಷಯ ತೆಗೆದು ಹಾಕಲು ನೋಡಿದಳು. "ಲವ್ ಅಂದ್ರೇನು?", ನಾ ಪ್ರಶ್ನೇ ಕೇಳಿ ತಲೆ ತಿಂತೀನಿ ಅಂದ್ರೆ, ಇವರು ನಂಗೇ ಕೇಳ್ತಿದಾರಲ್ಲ ಅನ್ನೋ ಹಾಗೆ ನೋಡಿದವಳು, "ಲವ್ ಅಂದ್ರೆ ಪ್ರೀತಿ, ಪ್ರೇಮ..." ಅಂದ್ಲು, "ಮತ್ತೇ" ಅಂದೆ, "ರೀ ಇನ್ನೂ ಜಾಸ್ತಿ ಗೊತ್ತಿಲ್ಲ ಕಪಾಟಿನಲ್ಲಿ ಡಿಕ್ಷನರಿ ಇದೆ, ಬೇಕಾದ್ರೆ ತೆಗೆದು ನೋಡಿ" ಅಂದಳು. "ಹಾಗಾದ್ರೆ ಪ್ರೀತ್ಸೊದು ಎಲ್ಲ ಸರಿ ಹೋಗಲ್ಲ ಅನ್ನು, ನನ್ನ ಪ್ರೀತಿಸಬೇಡ ಹಾಗಾದ್ರೆ" ಅಂತಂದೆ, "ಯಾಕೆ ನಾನೇನು ನೀವ ಕೆಟ್ಟೊದ್ನಾ, ಪಕ್ಕದ ಮನೆ ಪದ್ದು, ಹಾಲಿನಂಗಡಿ ಹಾಸಿನಿ ಅಂತ ಯಾರ್ ಯಾರನ್ನೊ ಪ್ರೀತ್ಸೋಕೇ" ಅಂತ ಹುಸಿ ಮುನಿಸಿದಳು, "ಅಂದ್ರೆ ನಾನು ಅವರನ್ನ ಪ್ರೀತಿಸ್ತೀನಿ..." ಮರುಪ್ರಶ್ನೆ ಎಸೆದೆ, "ಇಲ್ಲಾ.. ಹಾಗೇನಿಲ್ಲ, ನೀವ ಯಾರನ್ನ ಪ್ರೀತಿಸ್ತೀರಿ ನಂಗೆ ಗೊತ್ತು" ಅಂದ್ಲು ಕಳ್ಳ ನೋಟದಿ ನೋಡುತ್ತ. "ಯಾರಾ ಬೆಡಗಿ" ಅಂದೆ, ನಾಚಿ "ಛೀ ಹೋಗ್ರೀ ಮುಂಜಾನೆ ಮುಂಜಾನೆ ಬೇರೆ ಕೆಲ್ಸ ಇಲ್ವಾ ನಿಮಗೆ" ಅಂತ ಬಯ್ಕೊಂಡು ಟೀ ಕಪ್ಪು ತಂದು ಕೈಲಿಟ್ಟಳು. "ಹಾಗಾದ್ರೆ ಪ್ರೀತ್ಸೊದ ತಪ್ಪಾ?" ಮತ್ತದೇ ಪ್ರಶ್ನೆ, "ಈ ಲವ್ ಎಲ್ಲ ಹುಚ್ಚು, ಆದ್ರೆ ನೀವ ನನ್ನ ಪ್ರೀತ್ಸೊದು ತಪ್ಪಲ್ಲ ಬಿಡಿ" ಅಂತ ಅರ್ಥ ಮಾಡಿಸ ನೋಡಿದವಳು, ಒಳಗೊಳಗೆ ತಾನೇ ಗೊಂದಲಕ್ಕೊಳಗಾದಳು. "ಮತ್ತೆ ನೀನೇ ಲವ ಅಂದ್ರೆ ಪ್ರೀತಿ ಅಂದೆ, ಈಗ ನೋಡಿದ್ರೆ, ನಾನ ಮಾಡಿದ್ರೆ ಸರಿ ಅಂತೀಯ, ಆ ಹುಡುಗಿ ಮಾಡಿದ್ರೆ ತಪ್ಪು ಅಂತೀಯ, ನಾನೇನು ದೊಣ್ಣೆನಾಯಕನಾ ನನಗೊಂದು ನ್ಯಾಯ, ಊರಿಗೊಂದು ನ್ಯಾಯಾ ಮಾಡೋಕೆ" ವಾದಕ್ಕಿಳಿದೆ. "ರೀ ಅವಳದು ಹುಚ್ಚು ಪ್ರೀತಿ ಅದಕ್ಕೇ ಹಾಗಂದಿದ್ದು", ಸಿಡುಕಿದಳು. "ಓಹ್ ಅದರಲ್ಲೂ ಬೇರೆ ಬೇರೆ ವಿಧಗಳಿವೆ ಅನ್ನು" ಅಂತಂದರೆ, "ಎಷ್ಟು ವಿಧ ಅಂತ ಬೇಕಿದ್ರೆ, **ಪ್ರೇಮಲೋಕದ ಹೀರೊ ರವಿಚಂದ್ರನ್ ಹತ್ರ ಹೋಗಿ ಕೇಳಿ ಹೇಳ್ತಾರೆ**" ಅಂತ ಮಾರುತ್ತರವಿಟ್ಟಳು. ನಾ ಹೇಳುವುದು ಹೇಳಿಯಾಗಿತ್ತು ಇನ್ನು ಅವಳ ಚಿಂತನೆಗೆ ಬಿಟ್ಟು, ನಾ ಹೊರ ನಡೆದೆ.

ಟೀವೀ ಆನ್ ಮಾಡಿ ಕೂತರೆ, ಎಲ್ಲಾ ಚಾನಲ್ಲಿನಲ್ಲಿ ಪ್ರೀತಿ, ಪ್ರೇಮ... ಯಾರಿಗೂ ಅದೇನು ಅಂತ ಪೂರ್ಣ ಗೊತ್ತಿಲ್ಲ ಆದ್ರೂ ಫಿಲ್ಮ್, ಧಾರವಾಹಿ ನೂರು, ಕಾಲೇಜು ಹುಡುಗಿ, ಹುಡುಗ ಕರೆತಂದು ಪ್ರೇಮ ಅರಳಿತು ಅಂತ ತೋರಿಸಿಬಿಡ್ತಾರೆ. ಬೇಜಾರಾಗಿ ಆಫ್ ಮಾಡಿ ಕೂತಿದ್ದೆ, ಎಣಿಸಿದಂತೆ ಇವಳು ಬಂದಳು, ವಿಷಯ ತಲೆ ತಿಂತಿದೆ ಅದಕ್ಕೆ ಇಲ್ಲಿ ಬಂದಿದಾಳೆ ಅಂತ ಗೊತ್ತು, ಹತ್ತಿರ ಕೂತು, ನನ್ನ ಕೈಲಿದ್ದ ನಿಶ್ಚಿತಾರ್ಥ ಉಂಗುರ ಹಾಕಿ ತೆಗೆಯೋದು ಮಾಡುತ್ತ ಕೂತಳು, ಉಂಗುರ ತೆಗೆದು ಅವಳ ಕೈಗಿತ್ತೆ, ಏನು ಮಾತಾಡು, ಸಾಕು ಒಳಗೊಳಗೆ ತಳಮಳಿಸಿದ್ದು ಅನ್ನುವಂತೆ. "ರೀ ನಿಶ್ಚಿತಾರ್ಥದ ಉಂಗುರ ಅದು ಪ್ರೀತಿಯಿಂದ ಹಾಕಿದ್ದು, ಏನ್ ಹಾಗೆ ತೆಗೆದುಹಾಕ್ತೀರಾ" ಅಂತ ಮುಖ ಕೆಂಪಾಗಿಸಿದಳು, "ಒಹೋ ಉಂಗುರ ಹಾಕಲು ಪ್ರೀತಿ ಬೇಕು" ಅಂತ ಉದ್ಗಾರ ತೆಗೆದೆ. "ಹೂಂ ಮತ್ತೆ ನಮ್ಮ ಚಿಕ್ಕಪ್ಪನ ಮಗಳಿಗೆ ಅವಳ ಗಂಡ ಪ್ರೀತಿಯಿಂದ ಚಿನ್ನದ ನೆಕ್ಲೇಸ್ಸು, ಬಳೆ ತಂದುಕೊಟ್ಟೀದಾನೆ" ಅಂದ್ಲು. "ಪ್ರೀತಿಯನ್ನ ಚಿನ್ನದಲ್ಲಿ ಅಳೆಯಬಹುದು ಅಂದ್ರೆ, ನೀ ನನ್ನ ಒಂದು ಹತ್ತು ಗ್ರಾಮ್ ಪ್ರೀತಿಸ್ತೀಯಾ ಹಾಗಾದ್ರೆ, ಈ ಉಂಗುರ ಚೈನು ಅಷ್ಟಾಗ್ತದೆ" ಅಂತಂದೆ, "ಹೋಗ್ಲೀ ನೀವೇ ಹೇಳ್ರಿ ಪ್ರೀತಿ ಅಂದ್ರೆ ಏನು ಅಂತ, ನಾನೇನ್ ಹೇಳಿದ್ರೂ ತಪ್ಪೇ ನಿಮಗೆ, ಮೊದಲಿನಂಗೆ ಪ್ರೀತೀನೇ ಇಲ್ಲ" ಮತ್ತವಳ ಮಾತಿನಲ್ಲಿ ಪ್ರೀತಿ ಇಣುಕಿತ್ತು, ಆದರೆ ಈ ಸಾರಿ ಏನಾದ್ರೂ ಅದನ್ನು ಉದ್ಧರಿಸಿ ಏನಾದ್ರೂ ಹೇಳಿದ್ರೆ, ಏನಾಗುತ್ತೊ ಗೊತ್ತಿಲ್ಲ ಅನ್ನೋ ಭೀತಿ ಆಗಿ ಸುಮ್ಮನೇ "ನಂಗೂ ಗೊತ್ತಿಲ್ಲ" ಅಂದೆ. "ಗೊತ್ತಿಲ್ಲ ಅಂದ್ರೆ ಮುಂಜಾನೆಯಿಂದ ನನ್ನ ತಲೆ ಯಾಕೆ ತಿನ್ಬೇಕಿತ್ತು, ಈಗ ಏನಾದ್ರೂ ಸರಿ ಹೇಳಲೇಬೇಕು" ಅಂತ ಹಠ ಹಿಡಿದಳು. "ನಿನ್ನ ಫ್ರೆಂಡ ಪ್ರೀತಿ ಅಂತ ಇದ್ಲಲ್ಲ ಅವಳ ಪ್ರೀತಿ ಎಲ್ಲಿಗೆ ಬಂತು, ಅವಳನ್ನ ಕೇಳಿದ್ರೆ ಹೇಳ್ತಾಳೆ, ಎಕ್ಸಪರ್ಟ ಅವಳು" ಅಂದೆ, "ಅಯ್ಯೊ ಅವಳಾ, ಅವಳ ಹೆಸ್ರು ಪ್ರೀತಿ ಅಂತ ಅದಕ್ಕೇ ಇಟ್ಟಿದ್ದು, ಸ್ಕೂಲಲ್ಲೇ ನಾಲ್ಕು ಬಾಯ್ ಫ್ರೆಂಡ್ಸ ಇದ್ರು ಅವಳಿಗೆ, ಲವ್ವೇ ಲೈಫಾಗಿತ್ತು, ಬಟ್ಟೆ ಬದಲಿಸಿದ ಹಾಗೆ ಲವರ್ಸ ಬದಲಾಯಿಸ್ತಾ ಇದ್ಲು, ಫೋನು ಮಾಡಿದಾಗ ಒಮ್ಮೆ ಹೊಸ ಹುಡುಗನ ಹೆಸ್ರು, ಎಷ್ಟು ಅಂದ್ರೆ, ಹುಡುಗರ ಹೆಸರು ರಿಪೀಟ ಆಗಿ ಹಳೆ, ಹೊಸ ಅಂತ ಹೆಸರಿನ ಹಿಂದೆ ಸೇರಿಸಬೇಕಾಗಿತ್ತು ಅಷ್ಟು ಜನ... ಅವಳನ್ನೇನ್ ಕೇಳ್ತೀರಾ" ಅಂತ ಅವಳ ಜನ್ಮ ಜಾಲಾಡಿದಳು, "ಹೋಗ್ಲಿ ನನ್ನ ಲವ್ ಮಾಡ್ತಾಳ ಅಂತಾನಾದ್ರೂ ಕೇಳ್ತಿದ್ದೆ" ಅಂದೆ, "ಪ್ರೀತ್ಸೊಕೆ ಅಂತ ಮದುವೆಯಾಗಿ ಮಡದಿ ಅಂತ ನಾನಿಲ್ವಾ, ಅವಳ್ಯಾಕೆ ಬೇಕು ನಿಮ್ಗೆ" ಅಂತ ದುರುಗುಟ್ಟಿದಳು, "ಹಾಗಾದ್ರೆ, ಪ್ರೀತ್ಸೊಕೆ ಮದುವೆ ಆಗಬೇಕು, ಮದುವೆ ಆದಮೇಲೆ ಮಡದಿಯನ್ನೇ ಪ್ರೀತಿಸ್ಬೇಕು" ಕೇಳಿದಷ್ಟು ಕ್ಲಿಷ್ಟವಾಗುತ್ತಾ ನಡೆದಿತ್ತು ವಿಷಯ.

"ನಂಗೆ ಅಪ್ಪ ಅಮ್ಮ ಅಂದ್ರೆ ತುಂಬಾ ಪ್ರೀತಿ ಅಂತೀವಲ್ಲ ಅದೂ ಪ್ರೀತೀನಾ, ಅವರನ್ನ ಪ್ರೀತ್ಸೊದ ತಪ್ಪಾ" ಅಂತ ಇವಳು ನನ್ನ ಪ್ರಶ್ನೆ ನನಗೆ ತಿರುಗಿ ಕೊಟ್ಟಳು, "ಹಾಂ ಈಗ ಕರೆಕ್ಟ ವಿಷಯಕ್ಕೆ ಬಂದೆ ನೋಡು, ಪ್ರೀತ್ಸೊದು ತಪ್ಪಾ, ಸರೀನಾ ಅಂತ ಹೇಳಬೇಕೆಂದರೆ, ಪ್ರೀತಿ ಅನ್ನೋದು ಏನು ಅನ್ನೊದರ ಮೇಲೆ ನಿಂತಿದೆ" ಅಂದೆ. "ಅದಕ್ಕೇ ನೀವು ಆಗಲಿಂದ ಪ್ರೀತಿ ಅಂದ್ರೇನು ಅಂತ ಕೇಳ್ತಾ ಇದ್ದದು, ಸರಿ ನಂಗಂತೂ ಏನೂ ತಿಳೀತಿಲ್ಲ" ಅಂತ ಅಸಹಾಯಕತೆ ಪ್ರದರ್ಶಿಸಿದಳು. "ಮಡದಿಗೆ ಮನೇಲಿ ಮುದ್ದು ಕೊಡೊದು ಪ್ರೀತೀನಾ, ಲಾಲಬಾಗನಲ್ಲಿ ಲವರ್‌ಗೆ ಲೋಚಲೊಚ ಲಿಪ್‌ಕಿಸ್ಸು ಕೊಡೋದು ಪ್ರೀತೀನಾ" ಅಂತ ನಿರ್ಭಿಡೆಯಿಂದ ಕೇಳಿದೆ, ಅಷ್ಟೆ ನೇರವಾಗಿ ಅವಳೂ "ಎರಡಕ್ಕೂ ಲವ್ ಅಂತನೇ ಅಂತಾರೆ, ಆದ್ರೆ ನಂಗೊತ್ತಿಲ್ಲ ಯಾವುದು ಸರಿ ಅಂತ" ಹೇಳಿದಳು. "ಆಗಲಿಂದ ಹೇಳಿದ್ದು ಇದನ್ನೇ, ಪ್ರೀತಿಯ ನಿರ್ಧಿಷ್ಟ ವ್ಯಾಖ್ಯಾನ ಆಗುವವರೆಗೆ ಅದು ಸರಿ ತಪ್ಪು ಅಂತ ಹೇಗೆ ಹೇಳೊದು, ಈ ಸಂದಿಗ್ಧತೆ, ಅಸ್ಪಷ್ಟತೆ ಇರುವವರೆಗೆ ಅದಕ್ಕೆ ಉತ್ತರ ಏನು? ಪ್ರೀತಿ ಬಗ್ಗೆ ಬರೆದರೆ ಪ್ರಬಂಧ ಮಂಡಿಸುವಷ್ಟು ವಿಷಯವಿದೆ" ಅಂತ ಕೈಚೆಲ್ಲಿದೆ, "ಹಾಗಾದ್ರೆ, ಆ ಹುಡುಗಿ ಓಡಿ ಹೋಗಿದ್ದು ತಪ್ಪು ಸರಿ ಅಂತ ಹೇಳೊಕಾಗಲ್ಲ" ಅಂದ್ಲು. "ಹೇಳಬಹುದು, ಆದರೆ ಪ್ರೀತಿ ಬಗ್ಗೆ ಹೇಳೊಕೆ ಆಗಲ್ಲ, ಅವರು ಸುಖವಾಗಿ ಬಾಳಿದರೆ ಅಲ್ಲಿ ನಿಜವಾಗಿ ಪ್ರೀತಿ ಇತ್ತು, ಇಲ್ಲಾಂದ್ರೆ ಇಲ್ಲ, ಏನೇ ಆದರೂ ಆ ಹುಡುಗಿ ಮಾಡಿದ್ದು ನನ್ನ ಮಟ್ಟಿಗೆ ತಪ್ಪೇ" ಅಂದೆ "ಯಾಕೆ, ಪ್ರೀತಿ ಕುರುಡು ಅಂತಾರಲ್ಲ ಯಾರ ಮೇಲೊ ಬಂದು ಬಿಡುತ್ತದೆ" ಅಂದ್ಲು, "ಪ್ರೀತಿ ಕುರುಡಾ? ಅದಕ್ಕೆ ಕಣ್ಣಿಗೆ ಬಟ್ಟೆ ಕಟ್ಟಿದವರು ನಾವು, ಆ ಬಂಧನಕ್ಕಿರಬೇಕಾದ ಗಟ್ಟಿತನ ಇಲ್ಲದೇ ಹುಳುಕು ಕಾಣದಿರಲಿ ಅಂತ... ಹದಿಹರೆಯದ ಹುಡುಗ ಹುಡುಗಿಯರದು ಇದೇ ತಪ್ಪು, ಹುಚ್ಚು ಆಕರ್ಷಣೆಯೇ ಪ್ರೀತಿ ಅಂದುಕೊಂಡು, ಪ್ರೀತಿ ಕುರುಡು, ಬಾಲಿಶ, ಮುಗ್ಧ ಅಂತ ಹಣೆಪಟ್ಟಿ ಕಟ್ಟಿಬಿಡುತ್ತಾರೆ, ಅಲ್ಲಿರುವುದು ಪ್ರೀತಿ ಅಲ್ಲ ಅದು ಆಕರ್ಷಣೆ" ಅಂದರೆ "ಆದ್ರೆ ಆಕರ್ಷಣೆಯಿಂದಲೇ ಪ್ರೀತಿ ಅಲ್ವೇ" ಅಂದ್ಲು. "ಅದೇ ಆಕರ್ಷಣೆಯೇ ಪ್ರೀತಿ ಅಲ್ಲವಲ್ಲ, ಹದಿಹರೆಯ ಹಾಗೇ, 'ಹುಚ್ಚು ಖೋಡಿ ಮನಸು ಅದು ಹದಿನಾರರ ವಯಸ್ಸು' ಅಂತ ಕವಿಗಳು ಸುಮ್ನೇ ಹೇಳಿದ್ದಲ್ಲ, ಅಲ್ಲಿ ಆಕರ್ಷಣೆ ಸಹಜ, ಅದು ಪ್ರೀತಿ ಅಲ್ಲ ಅಂತ ತಿಳಿದರೆ ಉತ್ತಮ" ಅಂದೆ. "ಹೂಂ ಹೂಂ... ಮತ್ತೆ ನಿಮಗೆ ಯಾರ ಮೇಲೆ ಆಕರ್ಷಣೆ ಬೆಳೆದಿತ್ತು?" ಅಂತ ಹುಬ್ಬು ಹಾರಿಸಿದ್ಲು, ನಸು ನಕ್ಕೆ. "ಹೇಳ್ರೀ..." ಅಂತ ತಿವಿದಳು "ಲೇ ಎಣಿಕೆ ಮಾಡ್ತಾ ಇದೀನೀ ತಾಳೇ" ಅಂದೆ. "ಹಾಂ" ಅಂತ ಬರಿಗೈಯಲ್ಲಿ ಪಟ ಪಟ ಹೊಡೀತಾ ಇದ್ಲು ಪ್ರೀತಿಯಿಂದ... "ಪ್ರೀತಿಸ್ತಾ ಇರೋದು ನಿನ್ನ ಮಾತ್ರ, ಪ್ರೀತ್ಸೊದ ತಪ್ಪಾ" ಅಂದೆ... ಆ ತುಟಿಯಿಂದ ಉತ್ತರ ಬರಲಿಲ್ಲ... ಬೇರೆ ಏನು ಸಿಕ್ಕಿತು ಇಲ್ಲಿ ಹೇಳಬೇಕಿಲ್ಲ...

ಪ್ರೀತಿ ಅನ್ನೊ ಪದಕ್ಕೆ ಏನು ಅರ್ಥ ಎಂದು ಹೇಳೊದೆ ಕಷ್ಟ ಹಾಗಿರುವಾಗ, ಆಕರ್ಷಣೆಯೇ ಪ್ರೀತಿ ಅಂತ ಅಂದುಕೊಳ್ಳುವವರನ್ನು ನೋಡಿದ್ರೆ ಬೇಜಾರಾಗುತ್ತದೆ, ಪ್ರೀತಿಗೆ ಒಂದು ರೀತಿ ಬದ್ಧತೆ ಬೇಕು, ನಂಬಿಕೆ ಬೇಕು, ನಿಸ್ವಾರ್ಥ ಮನೊಭಾವಬೇಕು, ಅದೆಲ್ಲ ಎಲ್ಲೂ ಕಾಣುತ್ತಿಲ್ಲ, ಇಲ್ಲ ಅಂತ ನಾ ಹೇಳುತ್ತಿಲ್ಲ, ಆದರೆ ಎಲ್ಲೊ ಕೆಲವೊಂದು ನೂರಕ್ಕೊಂದು ಉದಾಹರಣೆ ಸಿಕ್ಕೀತು. ಈಗ ಏನಾಗಿದೆ ಅಂದ್ರೆ, ಮೊಬೈಲುಗಳಲ್ಲಿ ಎಸ್ಸೆಂಸ್ಸು ಫ್ರೀ ಅಂತ ದಿನಕ್ಕೆ ನೂರು ಸಂದೇಶ ಕಳಿಸಿ, ಆಕಾಶದೆತ್ತರಕ್ಕೆ ನಮ್ಮ ಪ್ರೀತಿ, ಸಮುದ್ರದಾಳದಷ್ಟು ಆಳವಾಗಿ(ಡೀಪ್ ಲವ್) ಪ್ರೀತಿಸ್ತೀನಿ ಅಂತೆಲ್ಲ ಮೇಸುಜು ಬರೆದು (ಅಕಾಶ ಮುಟ್ಟಿ ಬಾ ಅಂತ ಹೇಳ್ಬೇಕು, ಇಲ್ಲ ಸಮುದ್ರಕ್ಕೆ ಹಾರಿ ಆಳ ಅಳೆದು ಬಾ ಅನ್ಬೇಕು!), ಆರ್ಕುಟ ಫೇಸಬುಕನಲ್ಲಿ ಲವ್ಸ ಲವ್ಸ ಯೂ ಅಂದು, ಜೀ-ಟಾಕ, ಯಾಹೂನಲ್ಲಿ ಹಹಹ ಅಂತ ಸುಮ್‌ಸುಮ್ನೇ ನಕ್ಕು, ಮೇಲ್‌ನಲ್ಲಿ ಹೂವು, ಹಾಡು ಅಂತ ಪತ್ರಗಳ ಮಳೆಗರೆದು... ಲವ್ ಅನ್ಕೊಂಡು ಬಿಡ್ತಾ ಇದಾರೆ. ಇದೆಲ್ಲ ಪ್ರೀತಿ ಅನ್ಕೊಂಡು, ಅಲ್ಲ ಅಂತ ಆಮೇಲೆ ತಿಳಿದು, ಇಲ್ಲ ಇನ್ನು ಬೇರೆ ಯಾರೊ ಕಡೆಗೆ ಆಕರ್ಷಣೆಯಾಗಿ, ರಕ್ತದಲ್ಲಿ ಪತ್ರ ಬರೆದು(ತಮ್ಮದೇ ಇಲ್ದಿದ್ರೂ ಕೋಳೀದು ಆದೀತು), ಅತ್ತು ಕರೆದು, ಇಲ್ಲ ಸತ್ತೇ ಹೋಗಿಬಿಟ್ಟರೆ, ಇದನ್ನೇ ಪ್ರೀತಿ ಅಂದು... ಪ್ರೀತ್ಸೊದ್ ತಪ್ಪಾ ಅಂದ್ರೆ ಏನು ಹೇಳಬೇಕು... **ಈ ಅಟೊಗಳ ಹಿಂದೆ ಚೂರಿ ಚುಚ್ಚಿದ ಹೃದಯದ ಚಿತ್ರಗಳ ಹಿಂದೆ ಒಂದು ಚಿತ್ರಕಥೆಗಾಗುವಷ್ಟು ಕಥೆಯಿರುತ್ತದೆ ಕೇಳಿ ನೋಡಿ... ಈ ಮನಸ್ಸು ದುಂಬಿಯ ಹಾಗೆ, ಇಂದು ಗುಲಾಬಿ ಅಂದ ನೋಡಿದ್ರೆ, ನಾಳೆ ಸಂಪಿಗೆ ಸುವಾಸನೆ ಬಂತು ಅಂತ ಅತ್ತ ಹೊರಟು ಬಿಡುತ್ತದೆ**, ಅದಕ್ಕೇ ಏನೊ ಹಿರಿಯರು ಮದುವೆ ಅಂತ ಮಾಡಿ, ಪ್ರೀತಿಸಿಕೊಳ್ಳಿ ಅಂದು ಬಿಡ್ತಾ ಇದ್ದಿದ್ದು.

ಸಂಜೆ ಗಾರ್ಡನ್ನಿನಲ್ಲಿ ಸುತ್ತೋಕೆ ಹೋಗಿದ್ವಿ, ಅಮ್ಮನ ವಯಸ್ಸಿನ ಅಂಟಿಯೊಬ್ಬರು ಎದುರು ಬಂದು, "ನಿಮ್ದು ಲವ್ ಮ್ಯಾರೇಜಾ? ಏನು ಅನ್ಯೊನ್ಯವಾಗಿದೀರಾ" ಅಂದ್ರು... ಇಬ್ರೂ ಒಬ್ಬರ ಮುಖ ಒಬ್ರು ನೋಡ್ಕೊಂಡು ನಗುತ್ತ "ಒಂದ್ರೀತಿ ಹಾಗೇನೆ, ಆದ್ರೆ ಮ್ಯಾರೇಜ ಆದ್ಮೇಲೆ ಲವ್ ಮಾಡ್ತಾ ಇದೀವಿ" ಅಂದ್ವಿ. "ನನ್ನ ಮಗಾನೂ ಇದಾನೇ, ಲವ್ ಲವ್ ಅಂತ ಅದ್ಯಾವ್ದೋ ಹುಡುಗೀ ಹಿಂದೆ ಸುತ್ತತಾ ಇದಾನೇ" ಅಂತ ಗೊಣಗುತ್ತ ನಡೆದರು, ಮುಂದೆ  ಹೊರಟಿದ್ವಿ, ಇವಳು ತಿರುಗಿ "ಅಂಟೀ ಪ್ರೀತ್ಸೊದ್ ತಪ್ಪಾ?" ಅಂತ ಕೇಳಿದ್ಲು... ಅವರಿಗೆ ಏನು ಹೇಳ್ಬೇಕೊ ತಿಳೀಲೇ ಇಲ್ಲ... ನಗ್ತಾ ಹೊರಟೇ ಹೋದ್ರು, ಇವಳು ನನ್ನ ಮುಖ ನೋಡಿ ನಗ್ತಾ ಇದ್ಲು. "ಏನೇ ಅನ್ನು ಕಣೇ, ಅಂಟೀನಾ ಪ್ರೀತ್ಸೊದು ತಪ್ಪೇ!!!" ಅಂತ ತರಲೇ ಮಾಡಿದೆ, ಹಿಡಿದ ಅಂಗೈ ಚಿವುಟಿದ್ಲು ಪ್ರೀತಿಯಿಂದ....

ಇಷ್ಟೊತ್ತು ಓದಿದ್ದು ಇಷ್ಟಾ ಆದ್ರೆ ಮೆಚ್ಚಿ, ಸಿಟ್ಟು ಬಂದಿದ್ರೆ ಚುಚ್ಚಿ ಇಂಚೆ (ಇ-ಅಂಚೆ) ಹಾಕಿ... ನನ್ನ ವಿಳಾಸ pm@telprabhu.com . ಹೀಗೆ ನೀವು ಓದಿ ಖುಶಿಯಾಗಿದ್ರೆ ನಿಮ್ಮ ಗೆಳೆಯರಿಗೂ ಇದನ್ನ ಕಳಿಸಿ, ಸಂತೋಷ ಇರೋದೇ ಹಂಚೋಕೆ ತಾನೆ...